ನನಗೆ ಈ ತರಹದ ಅಲಂಕಾರಿಕ ನುಡಿಗಟ್ಟಿನ ಸಮಜಾಯಿಷಿ ಬೇಡ.

ಸರಿ, ನೀನು ಸಂಪೂರ್ಣ ನಮ್ಮ ಮನೆಯವರನ್ನೆಲ್ಲ ಬಿಟ್ಟು ಹೊರಬಂದೆ ಅಂತ ಇಟ್ಟುಕೋ, ಆಗ ನಿನಗೆ ಸಿಗುವುದು ಸಂಪೂರ್ಣ ಸ್ವಾತಂತ್ರ್ಯವಾ? ಈ ಕುಟುಂಬದಲ್ಲಿ ತಲತಲಾಂತರಗಳಿಂದ ಎಷ್ಟು ಜೀವಗಳು ಜೀವನವನ್ನು ಸಾಗಿಸಿ ಅರ್ಧಕ್ಕೆ ಬಿಟ್ಟು ಹೋಗಿಲ್ಲವಾ? ಬಿಟ್ಟು ಹೋಗಿರುವುದನ್ನು ಇರುವವರು ಮುಂದಕ್ಕೆ ಸಾಗಿಸಬೇಕು, ಮತ್ತೆ ನಮ್ಮದು ಅರ್ಧಕ್ಕೆ, ನಂತರ ನಮ್ಮ ಮುಂದಿನವರು.

ನನಗೆ ನನ್ನ ಕುಟುಂಬ ಬೇಕು.



ದಡ್ಡಿ ಥರ ಮಾತನಾಡಬೇಡ. ನೀನೂ ಸಹ ಒಂದು ಕುಟುಂಬದ ಒಳಗಿಂದಾನೇ ಬಂದಿರೋದು, ಈಗ ನನಗೆ ಕುಟುಂಬ ಬೇಡ ಅನ್ನುವೆ. ಮತ್ತೊಂದು ಕಡೆ ನನಗೆ ನನ್ನದೇ ಆದ ಕುಟುಂಬ ಬೇಕು ಎನ್ನುವೆ. ನಿನಗೆ ಒಂದು ಸ್ಪಷ್ಟತೆ ಇಲ್ಲ.

ಹೌದು. ನನಗೆ ನನ್ನದೇ ಆದ ಕುಟುಂಬ ಬೇಕು.

ಸರಿ, ಅಲ್ಲಿ ಯಾರಿರುತ್ತಾರೆ?

ಮುತ್ತುಗದ ಮರದಲ್ಲಿ ಮಕರಂದವನ್ನು ಹೀರುತ್ತಿದ್ದ ಹಕ್ಕಿ ಸುಶ್ರಾವ್ಯವಾಗಿ ಕೂಗುತ್ತ, ರೆಕ್ಕೆಗಳನ್ನು ಬಡಿದುಕೊಳ್ಳುತ್ತ ನಭದ ಕಡೆ ಹಾರಿತು. ಅದನ್ನು ನೋಡಿದಳು. ಸೂರ್ಯ ಕಾಣಿಸದೇ ಇದ್ದರೂ ಅದರ ಕಿರಣಗಳು ಮನೆಯ ಕಿಟಕಿಯ ಗಾಜು, ಗೋಡೆಯ ಮೇಲೆಲ್ಲಾ ಹಬ್ಬಿತ್ತು. ಮುತ್ತುಗದ ಹೂವಿನ ಬಣ್ಣ, ಸೂರ್ಯನ ಬಣ್ಣ ಒಂದರೊಳಗೊಂದು ಬೆರೆತು ಬೆಳಗು ಬೆಳಗುತ್ತಿತ್ತು; ಮತ್ತು ಆ ಕಡೆಯ ದಿಕ್ಕು ಇಡಿಯಾಗಿ ಮೋಹಕವಾಗಿ ಬೆಳಗುತ್ತಿರುವ ಘನ ಕೆಂಪಿನ ಪಾಕದಲ್ಲಿ ಮೀಯುತ್ತಿತ್ತು. ಜೀವಂತವಾಗಿ ಘಟಿಸುತ್ತಿದ್ದರೂ ಆ ದೃಶ್ಯ ವ್ಯಾನ್ ಗೋನಂತಹ ಚಿತ್ರಕಾರ ಅದಕ್ಕೊಂದು ಚೌಕಟ್ಟನ್ನು ಹಾಕಿ ಅದಕ್ಕೆ ಗಾಢತೆಯನ್ನು ಬರಿಸಿದಂತಿತ್ತು

ನೋಡಿದೆಯಾ, ನಿನ್ನ ಹತ್ತಿರ ಉತ್ತರವಿಲ್ಲ. ನಿನಗೆ ಬೇಕಿರುವುದು ಸ್ವಾತಂತ್ರ್ಯವಲ್ಲ; ಎಲ್ಲರಿಂದ ಬೇರ್ಪಟ್ಟ ಒಂಟಿ ಬದುಕು. ಎಲ್ಲರ ಜೊತೆ ಬಾಳುವ ಸ್ಥೈರಣೆ ಇಲ್ಲ. ಮುಕ್ತತೆಯಲ್ಲಿ ಎಲ್ಲವನ್ನೂ ಖುಲ್ಲಂಖುಲ್ಲ ಮಾತಾಡಿ ಬಗೆಹರಿಸಿಕೊಳ್ಳಬಹುದು. ಆದರೆ, ನೀನು ಬಯಸುತ್ತಿರುವ ಸ್ವಾತಂತ್ರ್ಯಕ್ಕೆ ಅರ್ಥವಿಲ್ಲ, ಅಲ್ಲದೆ ಬಿಡುಗಡೆ ಬಯಸುವುದಕ್ಕೆ ನಿನಗೆ ಅಂತಹ ಅಸಹನೀಯವಾದಂತಹ ಸನ್ನಿವೇಶವಾದರೂ ಏನಿದೆ?

ನಿನಗೆ ಅರ್ಥ ಆಗುವುದಿಲ್ಲ. ನಾನು ನಿನ್ನಷ್ಟು ತುಂಬಾ ದೂರಕ್ಕೆ ಹೋಗಿ ಯೋಚಿಸಲಾರೆ. ನಿನ್ನ ಎಲ್ಲ ಮಾತುಗಳ ಹಿಂದೆ ನಿನ್ನದೇ ಆದ ಸ್ವಾರ್ಥ, ಹುನ್ನಾರಗಳಿದ್ದಾವೆ. ನಿನ್ನ ಒಳಗಿನ ಕನ್ನಡಿಯ ಮುಂದೆ ಅವುಗಳನ್ನೆಲ್ಲ ಇಡು, ನಿನಗೆ ಅರ್ಥ ಆಗುತ್ತೆ.

ಈ ಮಾತುಗಳಿಗೆ ಹೇಗೆ ಪ್ರತಿಕ್ರಿಯಿಸಬೇಕೆಂದು ಗೊತ್ತಾಗದೆ ಸುಮ್ಮನೆ ಕುಳಿತ. ನಭಕ್ಕೆ ಹಾರಿದ್ದ ಪಕ್ಷಿ ಮತ್ತೆ ಅದೇ ಮರಕ್ಕೆ ಹಾರಿ ಬಂದು, ಮತ್ತೆ ಹೊಸ ಹೂವುಗಳ ಒಳಗೆ ತನ್ನ ಕೊಕ್ಕನ್ನು ಇಟ್ಟಿತು. ಇಬ್ಬರೂ ಏಕಕಾಲದಲ್ಲಿ ಅದನ್ನು ನೋಡಿದರು. ಸ್ಥಿರ ಜಲವರ್ಣ ಚಿತ್ರದಿಂದ ಬಣ್ಣದ ಜಲ ಹೊರ ಹರಿದು ಅದರಲ್ಲಿ ಮೂಡಿದ್ದ ಆಕೃತಿಗಳು ಜೀಕಿ ಆಚೆ ಹೋಗುವಂತಿತ್ತು ಕ್ಷಣ.

ಕ್ಷಣದ ಮೌನವನ್ನು ಮುರಿದು, ತಾನು ಆಡಿದ ಹಿಂದಿನ ಮಾತಿಗೆ ನನಗೆ ಸದ್ಯವನ್ನು ಮೀರಬೇಕು ಅಷ್ಟೇ ಎನ್ನುವ ನುಡಿಯನ್ನು ಸೇರಿಸಿದಳು.

ಹೌದು, ನಾನೂ ಅದನ್ನೇ ಹೇಳ್ತಾ ಇರೋದು. ಸದ್ಯವನ್ನು ಮೀರುವುದು ಎಂದರೆ ಅದರೊಳಗೆ ತೂರಿ ಹೋಗಬೇಕು, ಅದರ ತೀವ್ರತೆಗೆ ವಿಚಲಿತರಾಗದೆ, ಅದರಿಂದ ತಪ್ಪಿಸಿಕೊಂಡು ಹೋಗಬಾರದು.

ಅವರ ಆರು ವರ್ಷದ ಮಗಳು ಸುಪರ್ಣ ಬಂದಳು ಅಲ್ಲಿಗೆ. ಅವರ ಮಾತುಗಳು ಅರ್ಧಕ್ಕೆ ನಿಂತವು.

ಸುಪಿ, ಇವೊತ್ತು ಅಜ್ಜಿಗೆ ಹೋಗಿ ಹೇಳು, ಇವೊತ್ತು ನೀನೇ ತಿಂಡಿ ಮಾಡಬೇಕಂತೆ. ಅಮ್ಮನಿಗೆ ಮೈಯಲ್ಲಿ ಅರಾಮಿಲ್ಲ ಅಂತ.

ಏನೂ ಬೇಕಾಗಿಲ್ಲ. ನನಗೆ ಏನೂ ಆಗಿಲ್ಲ. ಸುಳ್ಳು ಹೇಳೋದೇನೂ ಬೇಡ.

ಇವೊತ್ತು ಯಾರು ಸ್ಕೂಲಿಗೆ ಬಿಟ್ಟು ಬರುತ್ತೀರಾ ಎಂದು ಕೇಳಿದಳು ಮಗಳು ಸುಪರ್ಣ.

ತಕ್ಷಣಕ್ಕೆ ಇಬ್ಬರೂ ಒಂದೇ ಬಾರಿಗೆ ಒಂದೇ ಉಸಿರಿನಲ್ಲಿ ನಾನು ಎಂದರು. ಅವರಿಬ್ಬರಿಂದ